

# ಸನ್ನಿಗೆ ಮಕ್ಕಳದೇ ಚಿಂತೆ

■ ವಿಶಾಖ ಎನ್‌.

ಅಶೆರ್, ನೋವಾ ಗಂಡುಮಕ್ಕಳು. ನಿಶಾ ಹೆಣ್ಣುಮಗು. ನಟಿ ಸನ್ನಿ ಲಿಯೋನ್‌ಗೆ ಸದ್ಯಕ್ಕೆ ತಮ್ಮ ಈ ಮೂವರೂ ಮಕ್ಕಳದ್ದೇ ಚಿಂತೆ. 'ಬುಲ್ಲೆಟ್' ಸಿನಿಮಾದಲ್ಲಿ ನಟಿಸಿದ ಮೇಲೆ ಅವರು ಆ ಕುರಿತು ಹೆಚ್ಚೇನೂ ತಲೆಕೆಡಿಸಿಕೊಳ್ಳುತ್ತಿಲ್ಲ. ಅದು ಓಡುವುದೋ ಬಿಡುವುದೋ ಎಂದು ಯೋಚಿಸಿಯೇ ಇಲ್ಲ. ಬದಲಿಗೆ, ಮಕ್ಕಳು ಯಾವಾಗ ಶಾಲೆಗೆ ಸುರಕ್ಷಿತವಾಗಿ ಹೋಗಿಯಾರೋ ಎನ್ನುವುದು ಅವರನ್ನು ಕಾಡುತ್ತಿರುವ ಸಂಗತಿ.

ಸನ್ನಿ ಲಿಯೋನ್ ಒಂದು ಕಾಲದಲ್ಲಿ ತಮ್ಮ ಮಾದಕತೆಯಿಂದ ಗುರುತಾಗಿದ್ದವರು. 2012ರಲ್ಲಿ 'ಜಿಸ್ಮ್ 2' ಹಿಂದಿ ಚಿತ್ರದ ಮೂಲಕ ಮಹೇಶ್ ಭಟ್ ಬ್ಯಾನರ್‌ಗೆ ಕಾಲಿಟ್ಟ ಮೇಲೆ, 'ಬಿಗ್ ಬಾಸ್'ಗೂ ಸ್ಪರ್ಧಿಯಾಗಿ ಹೋದರು. ಭಾರತದಲ್ಲಿ ನೆಲೆಗೊಂಡ ಅವರು, ಇಲ್ಲಿ ಪುರುಸೊತ್ತಾಗಿಯೇನೂ ಕೂರಲಿಲ್ಲ. ದತ್ತು ತೆಗೆದುಕೊಂಡ ಮಕ್ಕಳನ್ನೂ ಅವರು ಅಕ್ಕರಾಸ್ಥೆಯಿಂದ ಬೆಳೆಸುತ್ತಿದ್ದಾರೆ.

ಈಗ ಮಕ್ಕಳ ಆರೈಕೆ, ಮನೋವಿಕಾಸ, ಶಾಲೆಯಲ್ಲಿ ಕೋವಿಡ್ ಇರುವಾಗಲೂ ಸುರಕ್ಷಿತವಾಗಿ ಇರುವುದು ಹೇಗೆ ಎನ್ನುವ ಕುರಿತು ಯಾವ ಬರಹಗಳು ಪ್ರಕಟವಾದರೂ ಅವುಗಳ ಮೇಲೆ ಸನ್ನಿ ಲಿಯೋನ್ ಕಣ್ಣು ಕೀಲಿಸುತ್ತಾರೆ. ಅಶೆರ್ ಹಾಗೂ ನೋವಾ ಇಬ್ಬರೂ ಇನ್ನೂ ಶಾಲೆಯ ಮೆಟ್ಟಿಲನ್ನೇ ಕಂಡಿಲ್ಲ. ಆನ್‌ಲೈನ್ ತರಗತಿಯ ಬಗೆಗೂ ಗೊತ್ತಿಲ್ಲ. ಇನ್ನೂ ಅವರಿಬ್ಬರೂ ಪುಟ್ಟ ಕಂದಮ್ಮಗಳು. ಆರು ವಯಸ್ಸಿನ ನಿಶಾ ಮಾತ್ರ ಸತತವಾಗಿ ಆನ್‌ಲೈನ್ ಕ್ಲಾಸ್ ಅನುಭವವನ್ನಷ್ಟೆ ಪಡೆದಿದ್ದಾಳೆ. ಅವಳಿಗೆ ಸಹಪಾಠಿಗಳೊಡನೆ ಶಾಲೆಯಲ್ಲಿ ಕೂರುವ ಸುಖವಿನ್ನೂ ಒದಗಬೇಕಿದೆ.

'ಶಾಲೆಯಲ್ಲಿ ಕಲಿಯುವ ದಿನಗಳೇ ಸುಖಕರ. ಕೋವಿಡ್ ಸಂದರ್ಭದಲ್ಲಿ ಇಡೀ ಶಿಕ್ಷಣ ವ್ಯವಸ್ಥೆಯೇ ಮರುವ್ಯಾಖ್ಯಾನಕ್ಕೆ ಒಳಗಾಗುತ್ತಿದೆ. ನನ್ನ ಮಕ್ಕಳ ಭವಿಷ್ಯ ಉತ್ತಮವಾಗಿರಬೇಕಾದರೆ ಸುರಕ್ಷಿತ ವಾತಾವರಣದಲ್ಲಿ ಅವರೆಲ್ಲ ಶಾಲೆಗೆ ಹೋಗುವಂತಾಗಬೇಕು. ಆ ದಿನಕ್ಕಾಗಿ ಕಾಯುತ್ತಿರುವೆ' ಎಂದು ಸನ್ನಿ ಲಿಯೋನ್ ಹೇಳಿದ್ದಾರೆ.

ದೊಡ್ಡವರು ಲಸಿಕೆ ಹಾಕಿಸಿಕೊಳ್ಳುವುದನ್ನು ನೋಡುವ ಮಕ್ಕಳು ಕಾಲಕ್ರಮೇಣ ತಮಗೆ ಯಾವುದು ಹಿತ ಎಂದು ನಿರ್ಧರಿಸುವ ಮಾರ್ಗವಾಗಿದೆ ಎನ್ನುವುದು ಸನ್ನಿ ಲಿಯೋನ್ ಅನಿಸಿಕೆ.

'ನಮಗಾದರೆ ಈಗ ಇರುವ ಆಯ್ಕೆಗಳೇ ಕಡಿಮೆ. ಕೊಟ್ಟ ಲಸಿಕೆಯನ್ನೇ ಹಾಕಿಸಿಕೊಂಡು ಏಗುತ್ತಿದ್ದೇವೆ. ಅದರ ಪರಿಣಾಮವನ್ನು ಸೂಕ್ಷ್ಮವಾಗಿ ಗಮನಿಸಿ, ಮಕ್ಕಳು ತಮಗೆ ಯಾವುದು ಸರಿ ಎಂದು ತೀರ್ಮಾನಿಸುತ್ತಾರೆ. ಇದು ಒಂದು ರೀತಿಯಲ್ಲಿ ಆಶಾದಾಯಕ ಸಂಗತಿ' ಎನ್ನುತ್ತಾರೆ. ■

# 'ಕೇಂದ್ರ ಪಾತ್ರ'ಗಳ ಖುಷಿಯಲ್ಲಿ ತಾಪ್ಸಿ

ಜರ್ಮನ್ ಮೂಲದ ಚಿತ್ರ 'ರನ್ ಲೋಲಾ ರನ್' ನೆಟ್‌ಫ್ಲಿಕ್ಸ್‌ನಲ್ಲಿ 'ಲೂಪ್ ಲಪೇಟಾ' ಹೆಸರಿನಲ್ಲಿ ತೆರೆಕಾಣುತ್ತಿದೆ. ಆಕಾಶ್ ಭಾಟಿಯಾ ನಿರ್ದೇಶನದ ಈ ಚಿತ್ರದ ನಾಯಕಿ ತಾಪ್ಸಿ ಪನ್ನು. ನಾಯಕಿ ಎನ್ನುವುದಕ್ಕಿಂತ 'ಕೇಂದ್ರ ಪಾತ್ರಧಾರಿ' ಎಂದರೆ ಅವರಿಗೆ ಖುಷಿಯಾಗುತ್ತದೆ.

ಈಗ ತಾಪ್ಸಿ ಬಳಿಗೆ ಯಾರಾದರೂ ಚಿತ್ರಕಥೆ ಹಿಡಿದುಕೊಂಡು ಬಂದರೆ, ಅವರನ್ನೇ ಕೇಂದ್ರವಾಗಿಟ್ಟುಕೊಂಡು ಸ್ಕ್ರಿಪ್ಟ್ ರೂಪಿಸಿರುತ್ತಾರಂತೆ. ಈ ಅನುಭವ ಸತತವಾಗಿ ಅವರಿಗೆ ಆಗುತ್ತಿದೆ. ನೀರಜ್ ಪಾಂಡೆ ನಿರ್ದೇಶನದ 'ಬೇಬಿ' ಹಿಂದಿ ಚಿತ್ರದಲ್ಲಿ ಸಣ್ಣ ಪಾತ್ರದಲ್ಲಿ ನಟಿಸಿದ ಮೇಲೆ ತಾಪ್ಸಿ ಪ್ರತಿಭೆ ಅನಾವರಣಗೊಂಡದ್ದು. ತೆಲುಗು ಚಿತ್ರಗಳಲ್ಲಿ ನಟಿಸಿದ ಮೇಲೆ ಅವರ ಮಾರುಕಟ್ಟೆ ಹೊಯ್ದಾಡದಲ್ಲಿತ್ತು. ಕ್ರಮೇಣ ಗಟ್ಟಿ ಪಾತ್ರಗಳಿಂದ ತಮ್ಮ ಅಭಿನಯ ಕೌಶಲವನ್ನು ಸಾಬೀತುಪಡಿಸಿದರು.

'ಆರೇಳು ನಿಮಿಷದ ಅವಕಾಶವನ್ನೂ ನಾವು ಎಷ್ಟರಮಟ್ಟಿಗೆ ಹಣ್ಣಾಗಿಸಿಕೊಳ್ಳಬಹುದೆನ್ನುವುದಕ್ಕೆ ನಾನೇ ಸಾಕ್ಷಿ. ಇವತ್ತು ನನ್ನ ವೃತ್ತಿಬದುಕು ಯಾವ ಘಟ್ಟದಲ್ಲಿ ಇದೆಯೋ ಆ ಕುರಿತು ತುಂಬು ಹೆಮ್ಮೆ ನನಗೆ ಇದೆ' ಎನ್ನುವ ತಾಪ್ಸಿ ಸಿನಿಮಾದ ಸೋಲು–ಗೆಲುವಿನ ಬಗೆಗೆ ಅಷ್ಟಾಗಿ ತಲೆಕೆಡಿಸಿಕೊಳ್ಳುವುದಿಲ್ಲ. ಮುಂದಿನ ಸ್ಕ್ರಿಪ್ಟ್ ಎದುರಲ್ಲಿ ಇರುತ್ತದಷ್ಟೆ. ■

